Fifth Report of the Public Accounts Committee

Presentation

Sri M. SRINIVAS NAIK (Mangalore).—I present the Fifth Report of the Committee on Public Accounts on the Appropriate and Finance Accounts for the year 1966-67 and the Audit Report for 1968.

Mr. DEPUTY SPEAKER.—The Fifth Report of the Committee on Public Accounts is presented.

Notice of adjournment Motion *re*: Unemployment among youths and Strikes by the students

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ನಾನೊಂದು ನಿಲುವಳಿ ಸೂಚನೆಯನ್ನು ಇವತ್ತು ಬೆಳಿಗ್ಗೆ ಕಳುಹಿಸಿದ್ದೇನೆ. ಅದು ನಿರುದ್ಯೋಗದ ಸಂಬಂಧವಾಗಿ ಇದೆ. ತಮಗೆಲ್ಲಾ ಗೊತ್ತಿರುವ ಹಾಗೆ ಇವತ್ತು ಬೆಳಿಗ್ಗಿನಿಂದ ವಿದ್ಯಾರ್ಥಿ ಯೋಜನಾ ಸಭಾ, ಕನ್ನಡ ಕ್ರಾಂತಿಕಾರಿ ಸಭಾ ವಿದ್ಯಾರ್ಥಿಗಳು ಸುಮಾರು 50-100 ಜನ—ಅಲ್ಲದೆ ಕಾಲೇಜು ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿಗಳು ಅವರೆಲ್ಲರೂ ಸೇರಿ ವಿಧಾನ ಸೌಧದ ಮುಂದುಗಡೆ ಉಪವಾಸ ವ್ರತವನ್ನು ಮಾಡುತ್ತಾ ಇದ್ದಾರೆ. ಅವರಲ್ಲಿ ಕೆಲವರು ಸುಮಾರು 3-4 ವರ್ಷದಿಂದ ಪದವೀಧರರಾಗಿ ಇಂಜನಿಯರಿಂಗ್ ಡಿಗ್ರಿ ಮತ್ತು ಡಿಪ್ಲೊಮಾ ಪಡೆದು ನಿರುದ್ಯೋಗದ ಬಾಯಿಗೆ ತಳ್ಳಲ್ಪಟ್ಟಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಅನೇಕ ವರ್ಷಗಳಿಂದ ಈ ಸಮಸ್ಯೆ ಬೆಳೆದು ಬಂದು ಬಹಳ ಭೀಕರವಾಗುತ್ತಾ ಇದೆ ಎಂಬುದು ತಮಗೆ ಗೊತ್ತಿದೆ. ಹಿಂದೆ ಈ ಸಂಖ್ಯೆ 13 ಮಿಲಿಯನ್ ಇದ್ದುದು 3-4 ಪಂಚವಾರ್ಷಿಕ ಯೋಜನೆಗಳಾದರೂ ಕೂಡ ಈಗ ಇನ್ನೂ ಹೆಚ್ಚಾಗುತ್ತಲೆ ಇದೆ, ಎಂದು ಸರ್ಕಾರದ ವಕ್ತಾರರು ಹೇಳುತ್ತಾ ಇದ್ದಾರೆ. ಒಂದೊಂದು ಯೋಜನೆ ಆದಂತೆ ನಿರುದ್ಯೋಗವೂ ಕೂಡ ಜಾಸ್ತಿಯಾಗುತ್ತಾ ಇದೆ. ಅದೇ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಸಹ ಇದೆ.

ಆದ್ದರಿಂದ ಈ ಪರಿಸ್ಥಿತಿ ಬಗ್ಗೆ ಏನು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಾ ಇದೆ ಮತ್ತು ಏನು ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂಬುದು ಈಗ ಬಹಳ ಮುಖ್ಯವಾದ ಅಂಶ. ಇಂಜಿನಿಯರಿಂಗ್ ಪಾಸ್ ಆದವರು ಯಾರಿದ್ದಾರೆ ಅವರಿಗೆ ಕಂಟ್ರಾಕ್ಟ್ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ. ಅದೂ ಕೂಡ ಸರಿಯಾಗಿಲ್ಲ ಎಂದು ನಮ್ಮ ಮಾನ್ಯ ಸ್ನೇಹಿತರಾದ ಅಜೀಜ್‌ಸೇಠ್‌ರವರು ಹೇಳುತ್ತಾರೆ. ಆದ್ದರಿಂದ ಈ ಪ್ರಶ್ನೆಯನ್ನು ಮೇಲ್ಮಟ್ಟದ ರೀತಿಯಲ್ಲಿ ಎಂದರೆ ಯುದ್ಧ ಪರಿಸ್ಥಿತಿಯ ರೀತಿಯಲ್ಲಿ ತೀರ್ಮಾನ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹೊಸ ಕೈಗಾರಿಕೆಗಳೂ ಕೂಡ ಸ್ಥಾಪನೆ ಆಗುತ್ತಾ ಇಲ್ಲ ಅಲ್ಲದೆ ವ್ಯವಸಾಯದಲ್ಲೂ ಕೂಡ ಸರಿಯಾದ ಆಧುನಿಕ ವ್ಯವಸ್ಥೆಯಾಗುತ್ತಿಲ್ಲ. ಇದರಿಂದಾಗಿ ಉದ್ಯೋಗಾವಕಾಶಕ್ಕೆ ಅನುಕೂಲವಿಲ್ಲದಂತಾಗಿದೆ, ನಿರುದ್ಯೋಗ ಜಾಸ್ತಿಯಾಗುತ್ತಾ ಇದೆ. ಒಂದು ಕಡೆ ಶ್ರೀಮಂತರು ದೊಡ್ಡ ಶ್ರೀಮಂತರಾಗುತ್ತಾ ಇದ್ದಾರೆ. ಬಡವರು ಇನ್ನೂ ಬಡವರಾಗುತ್ತಿದ್ದಾರೆ.

ಇವರು ಬಾಯಲ್ಲಿ ಎಲ್ಲಿ ನೋಡಲಿ ಆ ಸೋಷಿಯಲಿಜಂ ಮಾತುಗಳನ್ನು ಆಡಿದ್ದೂ ಆಡಿದ್ದೇ. ಆದರೆ ಅದನ್ನು ಕಾರ್ಯಗತ ಮಾಡುವ ಧೈರ್ಯವಾಗಲಿ ಅಥವಾ ಆ ಒಂದು ಛಾತಿಯಾಗಲಿ ಇವರಿಗಿಲ್ಲ. ಈ ಸರ್ಕಾರದವರು ಏನಿದ್ದರೂ ದೊಡ್ಡ ದೊಡ್ಡ ಬಂಡವಾಳಗಾರರನ್ನು ಬೆಳೆಸುತ್ತಿದ್ದಾರೆಯೇ ಏನಾ ಬಡವರನ್ನು ತಿರುಗಿ ಸಹ ನೋಡುವುದಿಲ್ಲ. ಬಡವರ ಗೋಳು ಹೇಳತೀರದಾಗಿದೆ. ಇದು ಬಹಳ ಸಾರ್ವಜನಿಕ ಪ್ರಾಮುಖ್ಯತೆಯುಳ್ಳದ್ದೂ ಮತ್ತು ಅತಿ ಜರೂರಾದದ್ದೂ ಆಗಿದೆ. ಆದ್ದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅನೇಕ ಜನ ವಿದ್ಯಾವಂತರು ಉದ್ಯೋಗ ಸಿಕ್ಕದೆ ಹಾಲಾಡಾಲನ್ನು ಕುಡಿದು ಪ್ರಾಣವನ್ನು ಬಿಟ್ಟವರಿದ್ದಾರೆ. ಇನ್ನು ಕೆಲವರು ರೈಲುಗಳಿಗೆ ತಲೆಕೊಟ್ಟು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇಂಥ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.